**ಸಾಕ್ಷಿಯು ದಿಃ 26.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ</u>**

1ನೇ ವಾದಿ ನನ್ನ ತಂದೆ. 1ನೇ ಪ್ರತಿವಾದಿಗೆ ಓದಲು ಬರೆಯಲು ಅಷ್ಟು ಬರುವುದಿಲ್ಲ ಹಾಗಾಗಿ ಅವರು ಸಾಕ್ಷ್ಯ ನುಡಿಯಲು ಬಂದಿಲ್ಲ. ಸರ್ವೇ ನಂಬರ್ 512 ರಲ್ಲಿ ಎಷ್ಟು ಸೈಟ್ ಗಳು ಅಲೊಟ್ ಆಗಿವೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 512 ರ ಬಡಾವಣೆಯ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಬಡಾವಣೆಯ ನಕ್ಷೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸರ್ವೇ ನಂಬರ್ 512 ರಲ್ಲಿ ನಿವೇಶನಗಳು ಮಂಜೂರಾದ ಫಲಾನುಭವಿಗಳ ಪೈಕಿ ಹೆಚ್ಚು ಫಲಾನುಭವಿಗಳು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 1ನೇ ವಾದಿ ಎಷ್ಟು ವರ್ಷದಿಂದ ದಾವ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಕಳೆದ 3 ವರ್ಷಗಳಿಂದ ಇಲ್ಲ ಎಂದು ನುಡಿಯುತ್ತಾರೆ. ದಾವ ದಾಖಲಿಸುವ ಸಮಯದ ಹಿಂದೆ ಎಷ್ಟು ವರ್ಷದಿಂದ ಸ್ವಾಧೀನದಲ್ಲಿ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ದಾವೆ ದಾಖಲಿಸುವ 2 ತಿಂಗಳ ಹಿಂದಿನಿಂದ ದಾವ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದು ನುಡಿಯುತ್ತಾರೆ.

2. ಪ್ರತಿವಾದಿಯು ಈಗೆ 20 ವರ್ಷಗಳಿಂದ ಮುಂಚಿನಿಂದಲೂ ದಾವ ಆಸ್ತಿಯಲ್ಲಿ ಶೆಡ್ ಮಾಡಿಕೊಂಡು ವಾಸ ಇದ್ದಾರೆ ಎಂದರೆ ಸರಿಯಲ್ಲ. ದಾವ ಆಸ್ತಿಗೆ ಸಂಬಂಧಿಸಿದಂತೆ ಖಾತೆಯು ಪ್ರತಿವಾದಿಯ ಹೆಸರಿಗೆ ಆಗಿದೆ ಎಂದರೆ ಸಾಕ್ಷಿಯು ಇತ್ತೀಚೆಗೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರ ದಾವೆ ದಾಖಲಿಸಿದ ನಂತರ ನಮಗೆ ತಿಳಿದಿರುತ್ತದೆ. ಸದರಿ ವಿಚಾರವಾಗಿ ಪಂಚಾಯತಿ ರಾಜ್ಯ ಕಾಯ್ದೆ ಯಡಿ ತಾಲ್ಲೂಕು ಪಂಚಾಯಿತಿಯ ಮುಂದೆ ಪ್ರಶ್ನೆ ಮಾಡಿರುವುದಿಲ್ಲ. ಪ್ರತಿವಾದಿಯು ದಾವ ಆಸ್ತಿಯಲ್ಲಿ ವಾಸ ಇರುವ ಮನೆಗೆ ವಿಧ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಇತ್ತೀಚೆಗೆ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಯಾವ ವರ್ಷ ವಿಧ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂದು ನಾನು ಸಂಬಂಧಪಟ್ಟ ಕಛೇರಿಯಲ್ಲಿ ವಿಚಾರ ಮಾಡಿರುವುದಿಲ್ಲ. ಆ ರೀತಿ ವಿಚಾರ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಮಗೆ ಗೊತ್ತಿರಲಿಲ್ಲ ಎಂದು

ನುಡಿಯುತ್ತಾರೆ. ಪ್ರತಿವಾದಿಯು ದಾವ ಆಸ್ತಿಗೆ ನಲ್ಲಿ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಇತ್ತೀಚೆಗೆ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ದಾವ ಆಸ್ತಿಗೆ ಕಂದಾಯ ಪಾವತಿಸುತ್ತಿದ್ದಾರೆ ಎಂದರೆ ಸಾಕ್ಷಿಯು ನಾವು ಪಾವತಿಸುತ್ತಿದ್ದೇವೆ ಎಂದು ನುಡಿಯುತ್ತಾರೆ.

3. ದಾವ ಆಸ್ತಿಯು 1993ರಲ್ಲಿ 1ನೇ ವಾದಿಗೆ ಮಂಜೂರಾಗಿರುತ್ತದೆ. ದಾವ ಆಸ್ತಿ ಮಂಜೂರಾದ ನಂತರ ನನ್ನ ತಂದೆಯ ಹೆಸರಿಗೆ ಖಾತೆಯಾಗಿರುತ್ತದೆ. ಯಾವ ವರ್ಷ ಖಾತೆಯಾಗಿದೆ ಎಂದು ನನಗೆ ಗೊತ್ತಿಲ್ಲ. 1993 ರಿಂದ ದಾವ ಆಸ್ತಿಗೆ ಕಂದಾಯ ಪಾವತಿರುವ ಬಗ್ಗೆ ರಶೀದಿ ಹಾಜರುಪಡಿಸಿದ್ದೇನೆ. ನಿಪಿ 2 ಮತ್ತು 3 ರಂತೆ ರಶೀದಿಯಂತೆ 16.08.2022 ಮತ್ತು 21.11.2020 ರಂದು ಕಂದಾಯ ಪಾವತಿ ಮಾಡಿದ್ದು ಈ ದಾವೆ ದಾಖಲಿಸುವ ಮುಂಚೆ ಮಾಡಿದ್ದೇವೆ ಎಂದರೆ ಸರಿ. 1993 ರಿಂದ 2020 ರವರೆಗೆ ದಾವ ಆಸ್ತಿಗೆ ಕಂದಾಯ ಪಾವತಿಸಿರುವ ಬಗ್ಗೆ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವ ಆಸ್ತಿಯು ಸುಮಾರು 20 ವರ್ಷಗಳ ಹಿಂದೆಯೇ ಪ್ರತಿವಾದಿಗಳ ಹೆಸರಿಗೆ ಖಾತೆಯಾಗಿದ್ದು ಅವರೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ